ಕಾರವಾರದಲ್ಲಿ ಎನ್.ಟಿ.ಪಿ.ಸಿ.ಯವರ ಉದ್ದೇಶಿತ ಪವರ್ ಪ್ಲಾಂಟ್ ಕುರಿತು.

1641(1804)

ಶ್ರೀ ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರದಲ್ಲಿ ಉದ್ದೇಶಿತ ಎಲ್ಎನ್ಜಿ (2000) ಆಧಾರಿತ ಪವರ್ ಪ್ಲಾಂಟ್ ಸ್ಥಾಪನೆಗೆ ಎನ್ಟಿಪಿಸಿಯವರು ಈ ಪ್ರಸ್ತಾವನೆಯನ್ನು ನಿರಾಕರಿಸಿರುವುದು ನಿಜವೇ : ಹಾಗಿದ್ದಲ್ಲಿ ನಿರಾಕರಿಸಲು ಕಾರಣಗಳೇನು?

ಆ) ಎನ್.ಟಿ.ಪಿ.ಸಿ.ಯವರು ಕೋಲ್ಬೇಸ್ಡ್ 2000 ಎಂಡಬ್ಲ್ಯೂ ಘಟಕವನ್ನು ಮಂಗಳೂರಿನಲ್ಲಿ ಸ್ಥಾಪಿಸಲು ಸಲಹೆ ಮಾಡಿರುವುದು ನಿಜವೇ, ಹಾಗಿದ್ದಲ್ಲಿ ಅದರ ವಿವರಗಳೇನು?

ಇ) ಮಂಗಳೂರಿನಲ್ಲಿ ಸ್ಥಾಪಿಸಲುದ್ದೇಶಿಸಿರುವ ಮಂಗಳೂರು ಪವರ್ ಕಂ-ರವರ 1000 ಎಂಡಬ್ಲ್ಯೂ ಯುನಿಟ್ ಹಾಗೂ ನಾಗಾರ್ಜುನ ಪವರ್ ಕಂ-ರವರ 1000 ಎಂಡಬ್ಲ್ಯೂ ಯೂನಿಟ್ಗಳಲ್ಲದೆ, ಹೆಚ್ಚುವರಿಯಾಗಿ 2000 ಎಂಡಬ್ಲ್ಯೂ ಯುನಿಟನ್ನು ಮಂಗಳೂರಿನಲ್ಲಿ ಸ್ಥಾಪಿಸಲಾಗುವುದೇ, ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ವೀರಕುಮಾರ್. ಅ. ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಎನ್.ಟಿ.ಪಿ.ಸಿ. ವತಿಯಿಂದ ಕಾರವಾರದಲ್ಲಿ ಎಲ್ಎನ್ಟಿ ಆಧಾರಿತ 2000 ಮೆ.ವ್ಯಾ. ಸಾಮರ್ಥ್ಯದ ಪವರ್ ಪ್ಲಾಂಟ್ ಸ್ಥಾಪಿಸುವ ಯಾವುದೇ ಪ್ರಸ್ತಾಪವೂ ಸರ್ಕಾರದ ಮುಂದೆ ಇಲ್ಲ.

ಆ) ಮಂಗಳೂರಿನ ಹತ್ತಿರ 2000 ಮೆ.ವ್ಯಾ. ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ಪವರ್ ಪ್ಲಾಂಟ್ ಸ್ಥಾಪಿಸುವ ಎನ್.ಟಿ.ಪಿ.ಸಿ. ಪ್ರಸ್ತಾವನೆಯು ಕಾರ್ಯಸಾಧುವಲ್ಲ.

ಇ) ಮಂಗಳೂರಿನ ಸಮೀಪ ಎನ್.ಟಿ.ಪಿ.ಸಿ.ಯವರ ಕಲ್ಲಿದ್ದಲು ಆಧಾರಿತ 2000 ಮೆ.ವ್ಯಾ. ಸಾಮರ್ಥ್ಯದ ಯೋಜನೆಯು ಕಾರ್ಯ ಸಾಧುವಲ್ಲ. ಏಕೆಂದರೆ ಈಗಾಗಲೇ ಮಂಗಳೂರು ಪವರ್ ಕಂಪೆನಿಯವರ 1000 ಮೆ.ವ್ಯಾ ಸಾಮರ್ಥ್ಯದ ಯೋಜನೆ ಮತ್ತು ನಾಗಾರ್ಜುನ ಪವರ್ ಕಾರ್ಪೋರೇಷನ್ರವರ 1000 ಮೆ.ವ್ಯಾ. ಸಾಮರ್ಥ್ಯದ ಯೋಜನೆಗಳಿಗೆ ಸರ್ಕಾರ ಪರವಾನಗಿ ನೀಡಿದೆ.